# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 02/2019**

**ದೋ.ಸಾ. : 01 ಫ್ರಾ.ಸಾ. : 01**

| | | |
|---|---|---|
| ಸಾಕ್ಷಿಯ ಹೆಸರು | : | ಗಾಯತ್ರಿ ಮಹಾಬಲೇಶ್ವರ ಭಟ್ |
| ಗಂಡನ ಹೆಸರು | : | ಮಹಾಬಲೇಶ್ವರ ಭಟ್ |
| ವಯಸ್ಸು | : | 66 ವರ್ಷ |
| ಕೆಲಸ | : | ಕೃಷಿ |
| ವಾಸ | : | ಬ್ರಹ್ಮೂರು, ತಾಃ ಅಂಕೋಲ |

**ದಿನಾಂಕಃ 20-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು ಅಂಕೋಲಾ ತಾಲೂಕಿನ ಬ್ರಹ್ಮೂರ ನಲ್ಲಿ ವಾಸವಾಗಿರುತ್ತೇನೆ. ನನಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಗ ಇರುತ್ತಾರೆ. 2013 ರಲ್ಲಿ ನನ್ನ ಗಂಡ ತೀರಿಕೊಂಡಿರುತ್ತಾರೆ. ಚಾಸಾ-9 ನನ್ನ ಮಗಳು. 2017 ನೇ ಇಸ್ವಿಯಲ್ಲಿ ನನ್ನ ಮಗ ಹುಬ್ಬಳ್ಳಿಯಲ್ಲಿ ವೇದ ಶಾಸ್ತ್ರವನ್ನು ಕಲಿಯುತ್ತಿದ್ದ ಹಾಗೂ ನನ್ನ ಮಗಳು ಕುಮಟಾದ ಹಾಸ್ಟೆಲ್ ನಲ್ಲಿ ಇದ್ದುಕೊಂಡು, ಬಿ.ಕಾಂ ವಿದ್ಯಾಭ್ಯಾಸ ಮಾಡುತ್ತಿದ್ದಳು ಹಾಗೂ ನಾನು ಮನೆಯಲ್ಲಿ ಒಬ್ಬಳೇ ವಾಸವಾಗಿದ್ದೆ. ನಮ್ಮ ಮನೆಯ ಸುತ್ತಮುತ್ತಲೂ 2 ಎಕರೆ 20 ಗುಂಟೆ ಕೃಷಿ ಜಮೀನು ಇರುತ್ತದೆ. ಸದರಿ ಜಮೀನಿನ ಸರ್ವೆ ನಂಃ 45/ಬ ಆಗಿರುತ್ತದೆ. ಸದರಿ ಜಮೀನು ನನ್ನ ಗಂಡನಿಗೆ ಆತನ ಪೂರ್ವಜರಿಂದ ಬಂದು, ಅದು ನನ್ನ ಗಂಡ ಹಾಗೂ ನನ್ನ ಅತ್ತೆಯಾದ ಶಾಂತಾ ವಾಸುದೇವ ಭಟ್ ರವರ ಸಾಮಾಯಿಕ ಹಕ್ಕಿನಲ್ಲಿರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು, ಅವರು ನಮ್ಮ ಜಮೀನಿನ ಸ್ವಲ್ಪ ದೂರದಲ್ಲಿ ವಾಸವಾಗಿರುತ್ತಾರೆ. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ಹೆಂಡತಿ ಮತ್ತು ಮಗ ಆಗಿರುತ್ತಾರೆ.

2. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಆರೋಪಿತರು. ಸದರಿ ಜಮೀನಿನ ಸಲುವಾಗಿ ನಮ್ಮ ಜೊತೆ ಜಗಳ ಮಾಡುತ್ತಾ ಬಂದಿರುತ್ತಾರೆ. ಆದ ಕಾರಣ ನಾನು ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರಿಂದ, 1 ನೇ ಆರೋಪಿ ನನ್ನ ಮೇಲೆ ಸಿಟ್ಟನಿದ ಇದ್ದವನು,

"ನಿಮ್ಮನ್ನು ಬೆಂಕಿ ಹಾಕಿ, ಸುಟ್ಟು ಕೊಲೆ ಮಾಡುತ್ತೇನೆ" ಎಂದು ಜೀವ ಬೆದರಿಕೆ ಹಾಕುತ್ತಾ ಬಂದಿರುತ್ತಾನೆ.

3. ಆ ನಂತರ ದಿಃ 12-11-2017 ರಂದು ನಾನು ನನ್ನ ಮನೆಯಲ್ಲಿದ್ದಾಗ, ಆರೋಪಿತರೆಲ್ಲರೂ ನಮ್ಮ ಜಮೀನಿಗೆ ಬಂದು, ಗದ್ದೆ ಉಳುಮೆ ಮಾಡುತ್ತಿದ್ದರು. ಅದನ್ನು ನೋಡಿದ ನಾನು ಆರೋಪಿತರಿಗೆ "ಯಾಕೆ ನೀವು ನಮ್ಮ ಗದ್ದೆ ಉಳುಮೆ ಮಾಡುತ್ತಿದ್ದೀರಿ ಎಂದು ಕೇಳಿದೆ, ಆಗ 1 ನೇ ಆರೋಪಿಯು ನನಗೆ ಉದ್ದೇಶಿಸಿ, ಏ ಮುದಿ ರಂಡೆ, ನೀನು ಯಾರು ಕೇಳೊಕೆ ಎಂದು ಬೈದನು, 2 ನೇ ಆರೋಪಿಯೂ ಸಹ ನನಗೆ ಉದ್ದೇಶಿಸಿ ಏ ಬೋಳಿ, ನಮ್ಮ ಮೇಲೆ ಕೇಸ್ ಹಾಕುತ್ತೀಯಾ? ಇದು ನಮ್ಮ ಜಮೀನು, ನೀನು ಮನೆಯಿದ ಹೊರಗೆ ಬಾ, ಇದೇ ಜಮೀನಿನಲ್ಲಿ ನಿನಗೆ ಮಣ್ಣು ಮುಕ್ಕಿಸುತ್ತೇನೆ ಎಂದು ಬೈದಾಡಿದಳು, 3 ನೇ ಆರೋಪಿಯೂ ಸಹ ನನಗೆ ಉದ್ದೇಶಿಸಿ ಏ ಬೋಳಿ ರಂಡೆ, ಪದೇ ಪದೇ ಪೊಲೀಸ್ ಠಾಣೆಗೆ ಹೋಗಿ ನಮ್ಮ ಮೇಲೆ ಕೇಸ್ ಮಾಡುತ್ತೀಯಾ?, ಕುನ್ನಿ ಎಂದು ಬೈದನು, ಆಗ ನಾನು ಅವರಿಗೆ ಯಾಕೆ ಬೈಯುತ್ತೀರಾ ಅಂತಾ ಕೇಳಿದಾಗ, ಮೂರೂ ಜನರು ನನಗೆ ಬೈಯುತ್ತಾ, ನನ್ನ ಮನೆಯ ಕಡೆಗೆ ಬಂದರು, ಆಗ 1 ನೇ ಆರೋಪಿ ನನಗೆ ರಂಡೆ ನೀನು, ಮನೆಯ ಒಳಗೆ ಬಿದ್ದು, ಸಾಯು ಎಂದು ಹೇಳಿ ನನ್ನನ್ನು ಮನೆಯ ಒಳಗೆ ದೂಡಿ, ಬಾಗಿಲು ಹಾಕಿ, ಹೊರಗಿನಿಂದ ಚಿಲಕ ಹಾಕಿದರು. ಆಗ ನಾನು ಜೋರಾಗಿ ಬೊಬ್ಬೆ ಹೊಡೆದೆ, ನಾನು ಬೊಬ್ಬೆ ಹಾಕಿದ್ದನ್ನು ಕೇಳಿಸಿಕೊಂಡು, ಚಾಸಾ-4 ಮತ್ತು 5 ರವರು ಅಲ್ಲಿಗೆ ಬಂದು, ಚಿಲಕವನ್ನು ತೆಗೆದರು. ನಂತರ ನಾನು ಹೊರಗೆ ಬಂದೆ, ಆಗ ಆರೋಪಿತರು ನನಗೆ "ನಿನ್ನನ್ನು ಈ ದಿನ ಬಿಟ್ಟಿರುತ್ತೇವೆ, ಒಂದಲ್ಲ ಒಂದು ದಿನ ತೆಗೆದು ಬಿಡುತ್ತೇವೆ" ಎಂದು ಬೆದರಿಕೆ ಹಾಕಿ, ಅಲ್ಲಿಂದ ಹೋದರು. ಈ ಘಟನೆ ನಡೆದಾಗ ಬೆಳಿಗ್ಗೆ ಸುಮಾರು 11-30 ಗಂಟೆಯಾಗಿರುತ್ತದೆ. ಆರೋಪಿತರು ಗಲಾಟೆ ಮಾಡಿದ ಸಮಯದಲ್ಲಿ ಮನೆಯಲ್ಲಿ ನಾನು ಒಬ್ಬಳೇ ಇದ್ದೆನು. ಜಗಳ ನಡೆದ ಕೂಡಲೇ ಅಂಕೋಲಾ ಪೊಲೀಸ್ ಠಾಣೆಗೆ ಹೋಗಿ, ದೂರನ್ನು ನೀಡಲು ಬಸ್ಸಿನ ಸೌಕರ್ಯ ಇರಲಿಲ್ಲ, ಆದರೆ ಸಂಜೆ 05-30 ಗಂಟೆಯ ಬಸ್ ಗೆ ಹೋಗಿ, ಮಿರ್ಜಾನ್ ಹೋಗಿ, ನಂತರ ಮಿರ್ಜಾನ್ ನಿಂದ ಅಂಕೋಲಾಗೆ ಬಸ್ ನಲ್ಲಿ ಹೋಗಿ, ಸಂಜೆ 07-30 ಗಂಟೆಗೆ ಅಂಕೋಲಾ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ಹೇಳಿಕೆಯ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ಹೇಳಿಕೆಯ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

4. ಆರೋಪಿತರು ಆ ದಿನ ನನ್ನ ಮೇಲೆ ಜಗಳ ಮಾಡಿ, ಬೆದರಿಕೆ ಹಾಕಿದ್ದರಿಂದ ನಾನು ದೂರು ಕೊಟ್ಟ ನಂತರ ಮನೆಗೆ ಹೋಗದೆ, ಗೋಕರ್ಣದಲ್ಲಿಯೇ ಉಳಿದುಕೊಂಡಿರುತ್ತೇನೆ. ನಂತರ ಮರು ದಿನ ಪೊಲೀಸರು ಪಂಚನಾಮೆ ಮಾಡಲು ನನಗೆ ಊರಿಗೆ ಬರುವಂತೆ ಹೇಳಿದ್ದರಿಂದ, ನಾನು ನನ್ನ ಊರಿಗೆ ಬಂದಿರುತ್ತೇನೆ ಹಾಗೂ ಪೊಲೀಸರಿಗೆ ಆರೋಪಿತರು ಗದ್ದೆ ಉಳುಮೆ ಮಾಡುತ್ತಿದ್ದ ಹಾಗೂ ನನ್ನ ಮೇಲೆ ಜಗಳ ಮಾಡಿ, ಬೆದರಿಕೆ ಹಾಕಿ, ಕೂಡಿ ಹಾಕಿದ ಸ್ಥಳವನ್ನು ತೋರಿಸಿರುತ್ತೇನೆ. ಅಲ್ಲಿ ಪೊಲೀಸರು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿ, ನಮ್ಮ ಸಹಿಯನ್ನು ಪಡೆದುಕೊಂಡರು. ಪೊಲೀಸರು ಸ್ಥಳದಲ್ಲಿ ಬೆಳಿಗ್ಗೆ 11-30 ರಿಂದ 12-30 ರ ವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ